ಹಗುರವಾಗಿದ್ದ ವ್ಯಕ್ತಿ. ಆದ್ದರಿಂದಲೇ ಅವರಲ್ಲಿ ಹಸಿವು ಮತ್ತು ಕಾಮ ಎರಡೂ ಕೊನೆಯವರೆಗೂ ಜಾಗೃತವಾಗಿದ್ದವು. ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಹಿತ್ಯಕ, ಸಾಂಸ್ಕೃತಿಕ ಶಕ್ತಿ ಕೇಂದ್ರಗಳ ಅಧಿಪತ್ಯಕ್ಕಾಗಿ ನಿರಂತರವಾಗಿ ಹೊಡೆದಾಡುತ್ತಿರುವ ಮತ್ತು ಅವುಗಳನ್ನು ಕಾಯ್ದುಕೊಳ್ಳಲು ವಿಪರೀತವಾದ ವಾಮ ಮಾರ್ಗಗಳನ್ನು ಅನುಸರಿಸುತ್ತಿರುವ ಯಾವೊಬ್ಬ ನಾಯಕನೂ ಗಾಂಧಿಯ ಸನಿಹಕ್ಕೆ ಕೂಡ ಹೋಗಲು ಸಾಧ್ಯವಾಗುವುದಿಲ್ಲ. **He is the only legend i have ever read...**'

ಅಷ್ಟರಲ್ಲಿ ಧಾತುಸೇನರ ಅನುಯಾಯಿ ಕೊಠಡಿಯನ್ನು ತೆರೆದು ಕೊಂಡು ಬಂದು ಸಣ್ಣ ಬ್ಯಾಗೊಂದನ್ನು ಧಾತುಸೇನರ ಕೈಗಿಟ್ಟಿದ್ದ. ಅಷ್ಟರಲ್ಲಿ ಅದೇ ರೂಮಿನಿಂದ ಬಂದ ಮೂವರು ವಿದೇಶಿಯರು ಬಾಬಾರನ್ನು ಕೂಡ ಮಾತನಾಡದೆ ಹೊರ ನಡೆದಿದ್ದರು. ಬ್ಯಾಗಿನೊಳಗಿಂದ ಸಣ್ಣ ಫೈಲೊಂದನ್ನು ತೆಗೆದ ಧಾತುಸೇನರು 'ನೀಲಾಂಜನ' ಎಂದಿದ್ದರು. ನೀಲಾಂಜನ ಎದ್ದು ಧಾತುಸೇನರ ಬಳಿ ಹೋಗಿ ನಿಂತು, '**Yes**, ನೀಲಾಂಜನ. ಆಂಜನೇಯ ಅಪ್ಪನಿಗೆ ಪ್ರಿಯವಾದ ದೇವರು ಮತ್ತು ಮನೆ ದೇವರು ಕೂಡ. ಇಬ್ಬರು ಗಂಡು ಮಕ್ಕಳ ನಂತರ ನಾನು ಹುಟ್ಟಿದ್ದೆ. ಅಪ್ಪನಿಗೆ ನಾನೆಂದರೆ ಪ್ರಾಣ. ಹಾಗಾಗಿ ತನ್ನ ಮನೆ ದೇವರ ಹೆಸರನ್ನೆ ನನಗೆ ಇಟ್ಟರಂತೆ...' ಎಂದು ನಗುತ್ತಾ ಹೇಳಿದ್ದಳು.

'ನೈಸ್, ನಾನಂತೂ ದೇವರ ಬಗ್ಗೆ ಇದುವರೆಗೂ, ಯಾರೊಂದಿಗೂ ಚರ್ಚಿಸಿಲ್ಲ. ಮುಂದೆ ಚರ್ಚಿಸುವುದಿಲ್ಲ ಕೂಡ...' ಎಂದು ಫೈಲನ್ನು ನೀಲಾಂಜನಾಳ ಕೈಗಿಟ್ಟಿದ್ದರು. ಅದು ನೀಲಾಂಜನಾಳು ಪ್ರಾರಂಭಿಸಲು ಉದ್ದೇಶಿಸಿದ್ದ ಆರ್ಗನಿಕ್ ಫರ್ಟಿಲೈಸರ್ ಫ್ಯಾಕ್ಟರಿಗೆ ಸಂಬಂಧಪಟ್ಟ ಸರ್ಕಾರದ ಪರ್ಮಿಟ್ ಮತ್ತು ಆದೇಶವಾಗಿತ್ತು. ನಾನೂ ಎದ್ದು ಹೋಗಿ ರಾಘವ ಪಂತುಲು ಕೊಟ್ಟಿದ್ದ ಗುಳಿಗೆಗಳಿದ್ದ ಪೌಚನ್ನು ಧಾತುಸೇನರ ಕೈಗಿಟ್ಟಿದ್ದೆ. ನೀಲಾಂಜನ ಅತ್ಯಂತ ಸಂಭ್ರಮಗೊಂಡಿದ್ದಳು.

'ನೀವು ತುಂಬಾ ಇಂಟರೆಸ್ಟಿಂಗ್ ಆಗಿ ಮಾತನಾಡುತ್ತೀರಿ. ನಿಮ್ಮಂಥವರೊಂದಿಗೆ **interact** ಮಾಡುವ ಸಂದರ್ಭ ಒದಗಿ ಬಂದದ್ದು ನಮ್ಮ ಯೋಗ. ನಿಮ್ಮ ಬಗ್ಗೆ ರಾಘವ ಪಂತುಲು ಹೇಳಿದ್ದರೂ, ನೀವು ಇಷ್ಟೊಂದು ಡೀಪ್ ಆಗಿ ಇರುತ್ತೀರೆಂದು ಅಂದು ಕೊಂಡಿರಲಿಲ್ಲ...' ನಾನು ಭಾವುಕನಾಗಿಯೇ ನುಡಿದಿದ್ದೆ. ಗುಳಿಗೆಗಳ ಪೌಚನ್ನು ಧಾತುಸೇನರು ತನ್ನ ಅನುಯಾಯಿ ಕೈಗಿತ್ತು ಹೇಳಿದ್ದರು: 'ಆಂ, ಪಾಪ **demonetisation** ಆದ ಹದಿನೈದು ದಿನಗಳ ನಂತರ ಬಂದು ಎರಡು ದಿನ ಇಲ್ಲಿದ್ದು ಹೋದ. ಕೋಟ್ಯಂತರ ರೂಪಾಯಿ ಮೌಲ್ಯದ ನೋಟುಗಳನ್ನು ಆಲೆಮನೆಯ ಒಲೆಗೆ ಹಾಕಿ ಸುಟ್ಟನಂತೆ. ಬಡವರಿಗೂ ಹಂಚಿದನಂತೆ. ಈ ಗಂಗೆಗೂ ಒಂದಿಷ್ಟು ಎಸೆದಿದ್ದ. ತುಂಬಾ **frustrate** ಆಗಿ ಇಲ್ಲಿಗೆ ಬಂದವನು ಹೊರಡುವಾಗ ತುಂಬಾ ಸಮಾಧಾನದಿಂದ ಇದ್ದ. ಪಿಲ್ಸ್ ತಯಾರಿಕೆಯ ಯೋಜನೆಯನ್ನು ಆಗಲೇ ರೂಪಿಸಿದ್ದು. ಫಾರ್ಮುಲ ರೂಪಿಸಲು ನಾನು ಮೂರು ತಿಂಗಳು ತೆಗೆದುಕೊಂಡೆ. ಫ್ಯಾಕ್ಟರಿಯ ಉದ್ಘಾಟನೆಯ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾನೆ. ಆದರೆ ನಾನು ಬರುವುದಿಲ್ಲ. ಕೇವಲ ಹತ್ತು ರೂಪಾಯಿಗೆ ಅತ್ಯಂತ ಬಡವರಿಂದ ಹಿಡಿದು ಅತ್ಯಂತ ಶ್ರೀಮಂತರವರೆಗೂ ಸುಖ ಪಡುವಂಥ ಸಾಧನ. ಕ್ಲಿಕ್ ಆದರೆ **demonetisation**ನಿಂದ ತಾನು ಕಳೆದು ಕೊಂಡ ಹಣದ ನಾಲ್ಕುಪಟ್ಟನ್ನು ಒಂದೇ ಒಂದು ವರ್ಷದಲ್ಲಿ ಪಡೆಯಬಹುದು. ಲಾಭದ ಅರ್ಧದಷ್ಟನ್ನು ಕಲ್ಕತ್ತಾದ ಮದರ್ ತೆರೆಸಾ ಫೌಂಡೇಶನ್‌ಗೆ ಕೊಡ್ತೀನಿ ಅಂತ ಹೇಳಿದ್ದಾನೆ. ನೀವು ಇಲ್ಲೆ ಊಟ